ಹೊರಗ ಬಂದ್ರು. ಅವ್ರನ್ನ ಕರ್ಕೊಂಡು ಒಳಗ ಹೋದ್ರು. ಆಮೇಲೆ ಒಂದು ಅರ್ಧ ಗಂಟೆಯವರೆಗೆ ಆ ಬ್ಯಾಂಕಿನ ವ್ಯವಹಾರ ಎಲ್ಲಾ ನಿಶ್ಶಬ್ದ ಆಗಿತ್ತು. ನಾನು ಹೇಳೊ ಮಾತನ್ನ ಬಹುಶಃ ಈಗಿನ ಕಾಲದ ಜನ ಸುಳ್ಳು ಅಂತ ತಿಳ್ಕೊಳ್ಳೊ ಅಷ್ಟು ಅವಿಶ್ವಸನೀಯ ಅನ್ನಿಸ್ತದ. ಬೇಂದ್ರೆಯವ್ರು ಮಾತು ಪ್ರಾರಂಭ ಆಗಿತ್ತು. 'ಖಾತೆ ತೆಗಿಬೇಕಂತ ಮಾಡೇನಿ.' ಆಮೇಲೆ ಅವ್ರಿಗೆ ಒಂದು ರೀತಿ ವ್ಯವಹಾರದೊಳಗಿಂದ ಹೇಳಬೇಕಂದ್ರ ವ್ಯವಹಾರಜ್ಞಾನ ಕಡಿಮೆ. ಅಂದ್ರೆ ಬ್ಯಾಂಕಿನ ಖಾತೆ ತಗ್ಯೋದು ಹ್ಯಾಗೆ ಅಂಬೋದು ಕೂಡಾನು ಅವ್ರಿಗೆ ಗೊತ್ತಿದ್ದಿಲ್ಲ. ಅನೇಕ ಫಾರ್ಮ್‌ಗಳಿದ್ದು ಆ ಫಾರ್ಮ್ ತುಂಬೂದು ಸಾಧ್ಯ ಇರ್ಲಿಲ್ಲ. ಮ್ಯಾನೇಜರ್ ಹೇಳಿದ್ರು: 'ಎಲ್ಲಾ ನಾನು ಮಾಡ್ತೇನಿ. ನೀವು ಕೇವಲ ಹಸ್ತಾಕ್ಷರ ಹಾಕೋದು.' ಆಮೇಲೆ ಒಳಗೆ ಕ್ಲರ್ಕ್ ಬಂದು ಏನೇನೊ ಫಾರ್ಮ್‌ಗಳನ್ನೆಲ್ಲ ತುಂಬಿದ. ಮುಂದೇನಂದ, 'ನಿಮ್ಮ ಗುರುತು ಹಿಡಿಯೋದಕ್ಕ ಒಬ್ಬ ಸಾಕ್ಷಿ ಬೇಕಲ್ಲಾ' ಅಂತಂದ. 'ನಾ ಬೇಂದ್ರೆ ಇದ್ದೀನಿ' ಅಂದ್ರು. 'ಹೌದ್ರಿ ನೀವು ಬೇಂದ್ರೆ ಇದ್ದೀರಿ. ನಮಗೂ ಗೊತ್ತು. ಎಲ್ಲರಿಗೂ ಗೊತ್ತು. ಊರ ಮಂದಿಗೆಲ್ಲಾ ಗೊತ್ತು. ಆದ್ರೆ, ಬ್ಯಾಂಕಿನೊಳಗ ಮಾತ್ರ ಈ ಬ್ಯಾಂಕಿನೊಳಗ ಖಾತೆ ಇರೋ ಅಂತಹ ಒಬ್ಬ ಮನುಷ್ಯ ನಾನು ನಿಮ್ಮನ್ನ ಗುರುತು ಹಿಡೀತೇನಿ, ನೀವು ಸಜ್ಜನರಿದ್ದೀರಿ ಅಂತ, ನೀವು ಮೋಸಗಾರರಲ್ಲ ಅಂತನ್ನೋ ಹಾಗೆ ಬರೀಬೇಕಾಗ್ತದ.' ಮ್ಯಾನೇಜರ್ ವಿನೋದ ಮಾಡಿದ್ರು. ಬೇಂದ್ರೆಯವರು ಬ್ಯಾಂಕಿನ ಬಗ್ಗೆ ಒಂದರ್ಧ ಗಂಟೆ ಭಾಷಣ ಮಾಡಿದ್ರು. ಒಂದು ಸಣ್ಣ ಮಾತು ಹೇಳಿದ್ರು, 'ನಂದು ಭಾಳ ಅಂದ್ರ ಒಂದು ನೂರಿನ್ನೂರು ರೂಪಾಯಿ ಅಕೌಂಟ್ ಇರಬಹುದು. ಇಷ್ಟೆಲ್ಲಾ ನೀವು ಕಾಳಜಿ ತಗೊಳ್ಳೊ ಮುಂದ, ಮತ್ತೆ ಈ ಸಾವಿರಗಟ್ಟಲೆ ಅಪರಾಧ ಯಾಕಾಗ್ತಾವ?' 'ನಮಗ ಗೊತ್ತಿಲ್ಲ' ಅಂತ ಅವ್ರು ಹೇಳಿದ್ರು. ಆಗಿನ ಕಾಲಕ್ಕ ಅಪರಾಧಗಳು, ಮಿಸ್ ಅಪ್ರಾಪ್ರಿಯೇಷನ್ ಅಂಬೋದು ಸಾವಿರದಾಗೊ ಲಕ್ಷದಾಗೊ ಇರ್ತಿತ್ತು. ಈಗಿನಂಗ ಕೋಟಿಗಟ್ಟಲೆ ಇರಲಿಲ್ಲ.

ಒಂದರ್ಧ ಗಂಟೆಯವರೆಗೆ ಬೇಂದ್ರೆ ಬ್ಯಾಂಕಿನ ಕುರಿತು, ಅಪರಾಧ ಆಗೋದರ ಕುರಿತು, ಧನವನ್ನು ಕುರಿತು ಮಾತಾಡಿದ್ರು. ಆಮೇಲೆ ಬೇಂದ್ರೆಯವ್ರು ಹೊರಟ್ರು. ಅರ್ಧ ಗಂಟೆಯವರೆಗೆ ಅಲ್ಲಿನ ಜನ ಎಲ್ಲಾ ಅವರ ಮಾತನ್ನ ಕೇಳಿ ಆನಂದಿಸಿದ್ರು. ಅದಕ್ಕಿಂತ ಹೆಚ್ಚಿನ ಆಶ್ಚರ್ಯ ಅಂತಂದ್ರ, ಮರುದಿವ್ಸ ಸ್ಥಾನಿಕ ಮರಾಠಿ ವೃತ್ತಪತ್ರಿಕೆಯೊಳಗ ಫ್ರಂಟ್ ಪೇಜಿನ ಮ್ಯಾಲ ಒಂದು ದೊಡ್ಡ ವಿಶೇಷ ನ್ಯೂಸ್–ಬಾತ್ಮಿ ಅಂತಾರಲ್ಲ ಅದು ಪ್ರಕಟ ಆಗಿತ್ತು; ಇಂತಿಂಥ ಬ್ಯಾಂಕ್‌ಗೆ ಪ್ರಾಧ್ಯಾಪಕ, ಕವಿವರ ಬೇಂದ್ರೆಯವರ ಸಂದರ್ಶನ. ಬೇಂದ್ರೆಯವರು ಬ್ಯಾಂಕಿನ ವ್ಯವಸಾಯ ಕುರಿತು, ಧನ ವಿನಿಯೋಗ ಕುರಿತು ಅರ್ಧಗಂಟೆಯವರೆಗೆ ಉಪನ್ಯಾಸ ಮಾಡಿದ್ರು. ಕಳಸೋ ಮುಂದ ಬ್ಯಾಂಕಿನ ಮ್ಯಾನೇಜರ್ ಒಂದು ಪುಷ್ಪಗುಚ್ಛ ಒಂದು ಹೂವಿನ ಹಾರ, ಒಂದು ತೆಂಗಿನಕಾಯಿ, ಒಂದು ಪೇಡೇದ ಕಟ್ಟು ಕೊಟ್ಟಿದ್ರು. ಬೇಂದ್ರೆಯವರು ಆ ಪೇಡೆದ ಕಟ್ಟು ತೆಗೆದು ಅಲ್ಲಿನ ಸಿಬ್ಬಂದಿಗಳು, ಬಂದಿದ್ದ ಗಿರಾಕಿಗಳು ಎಲ್ಲರಿಗೂ ಒಂದೊಂದೊಂದು ಪೇಡೆ ಹಂಚಿದ್ರು. ಬರಿಗೈಯಲ್ಲೇ ನಾನು ಬೇಂದ್ರೆ ಮನೀಗೆ ಹೋದ್ವಿ. ಇಂತಾದ್ದು ಒಂದು ಅದ್ಭುತವಾದ ಸಂಗತಿ. ಯಾವುದೋ ಒಬ್ಬ ಗ್ರಾಹಕ ಬಂದು ಬ್ಯಾಂಕಿನ ವ್ಯವಹಾರದ ಬಗ್ಗೆ ಒಂದು ಅರ್ಧಗಂಟೆವರೆಗೆ ಸಂತೋಷದ ಮಾತುಗಳನ್ನಾಡಿ ಜನರ ಮನಸ್ಸು ತೃಪ್ತಿ ಪಡಿಸಿದ ಎಂಬುದು ಎಷ್ಟು ಮಹತ್ವದ್ದು.

(ಕುಸುಮಾಕರ ದೇವರಗೆಣ್ಣೂರ ಅವರ ಪ್ರಕಟವಾಗಲಿರುವ ಪುಸ್ತಕ 'ಕ್ರಾಂತದರ್ಶನ'ದ ಆಯ್ದ ಭಾಗಗಳು)